## ಸ.ಹಿ.ಪ್ರಾ.ಶಾಲೆ. ಬೆನ್ನೂರು (ಚಂ)




### ನಾಸ್ತಿ ವಿದ್ಯಾಸಮಂ ಚಕ್ಷುಃ । ನಾಸ್ತಿ ಸತ್ಯಸಮಂ ತಪಃ ॥

( ವಿದ್ಯೆಗೆ ಸಮನಾದ ಕಣ್ಣು ಇನ್ನೊಂದಿಲ್ಲ, ಸತ್ಯಕ್ಕೆ ಸಮನಾದ ತಪಸ್ಸಿಲ್ಲ.)

– ಮಹಾಭಾರತ ಶಾಂತಿಪರ್ವ

**ಶಾಲೆಯ ಹಿನ್ನಲೆ:–** ನಮ್ಮ ಶಾಲೆಯು 78 ವರ್ಷಗಳ ಹಿಂದೆ ಪ್ರಾರಂಭವಾಗಿದೆ ನಮ್ಮ ಮಕ್ಕಳು ವಿದ್ಯಾವಂತರಾಗಬೇಕೆಂಬ ಆಕಾಂಕ್ಷೆಯಿಂದ 1942 ರಲ್ಲಿ ಶೈಕ್ಷಣಿಕ ಕ್ರಿಯೆ ಪ್ರಾರಂಭವಾಗಿದೆ. ಆದರೆ ಸ್ವಂತ ಕಟ್ಟಡ ವಿಲ್ಲದ ಕಾರಣ ಪ್ರತಿದಿನ ಒಂದೊಂದು ಸ್ಥಳಗಳಲ್ಲಿ ವಿದ್ಯಾಭ್ಯಾಸ ನಡೆದಿದೆ. ಒಂದು ದಿನ ಆಂಜನೇಯ ದೇವಸ್ಥಾನ ಕಟ್ಟೆ, ಒಂದು ದಿನ ಗೌಡರ ಚಾವಡಿ, ಇನ್ನೊಂದು ದಿನ ಗೋ ಶಾಲೆಯಲ್ಲಿ ಹೀಗೆ ನಡೆಯುತ್ತಾ 1950 ನೇ ಇಸವಿ ವರೆಗೆ ಶಿಕ್ಷಕರ ಮಾಹಿತಿ ತಿಳಿಯುತ್ತಿಲ್ಲ. 1951 ನೇ ಇಸವಿಯಲ್ಲಿ ಮೊಟ್ಟಮೊದಲ ಸರ್ಕಾರಿ ಶಿಕ್ಷಕರ ನೇಮಕವಾಗಿ ಕರ್ತವ್ಯ ನಿರ್ವಹಿಸಿದ " ಬಂಗಾರಪ್ಪ ಇಂಡಿಹಳ್ಳಿಯವರ ಮಾಹಿತಿ ಕಾಣ ಸಿಗುತ್ತದೆ. ಶಾಲೆಗೆ ಸ್ವಂತ ಕಟ್ಟಡ ಇಲ್ಲದ ಕಾರಣ ದಿ॥ ಶಿವರುದ್ರಪ್ಪ ಗೌಡರು ಕಲಗೋಡು ಇವರು ಶಾಲಾ ನಿವೇಶನ ದಾನ ನೀಡಿರುತ್ತಾರೆ. 1956 ರ ಹೊತ್ತಿಗೆ ಸ್ವತಂತ್ರ ಹೋರಟಗಾರರಾದ ದಿ॥ ಸಂಗಪ್ಪ ನಾಯಕರು ಮತ್ತು ಅಕ್ಕಪಕ್ಕದ ಗ್ರಾಮಸ್ಥರ ಮುತುವರ್ಜಿಯಿಂದ ಖಾಲಿ ನಿವೇಶನದಲ್ಲಿ ತರಗತಿ ಕೋಣೆ ಮಂಜೂರು ಮಾಡಿಸಿ ನಿರ್ಮಾಣ ಮಾಡಿದ್ದು ಕಂಡುಬರುತ್ತದೆ, ಕೆಲ ವರ್ಷಗಳ ನಂತರ 5 ಕೋಣೆಗಳು, ಅಡಿಗೆ ಕೋಣೆ, ದಾಸ್ತಾನು ಕೊಠಡಿ, ಶೌಚಾಲಯ, ಶಾಲಾ ಮೈದಾನದ ಸುತ್ತ ಕಾಂಪೌಂಡ್ ನಿರ್ಮಾಣಗೊಂಡಿವೆ. ಕುಡಿಯುವ ನೀರಿಗಾಗಿ ಬಾವಿಯು ನಿರ್ಮಾಣವಾಗಿದೆ.

ಈ ರೀತಿಯಾಗಿ ಕಾರ್ಯಾರಂಭಗೊಂಡ ಶಾಲೆಯ ವಜ್ರಮಹೋತ್ಸವವನ್ನು 2017 ರಲ್ಲಿ ಅತಿ ಅದ್ಧೂರಿ ಹಾಗೂ ವೈಭವಯುತವಾಗಿ ಅರ್ಥಪೂರ್ಣವಾಗಿ ಆಚರಿಸಲಾತು. ಈ ಸಂದರ್ಭದ ಸವಿ ನೆನಪಿಗಾಗಿ ಸ್ಮರಣ ಸಂಚಿಕೆ "ವಜ್ರದೀವಿಗೆ" ಪುಸ್ತಕ ಹೊರತರಲಾಗಿದೆ. 1942 ರಿಂದ ಇಲ್ಲಿಯವರೆಗೆ 19 ಜನ ಮುಖ್ಯ ಶಿಕ್ಷಕರು, 35 ಜನ ಸಹಶಿಕ್ಷಕರು ಕಾರ್ಯ ನಿರ್ವಹಿಸಿದ್ದು ಕಂಡು ಬರುತ್ತದೆ. 2015 ರಿಂದ ಗಿರಿಜಮ್ಮ

ಎಸ್ ಎಂಬ ನಾನು ಬಡ್ತಿ ಮುಖ್ಯ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. 2015-16ನೇ ಸಾಲಿನಿಂದ ಇಬ್ಬರು ಮಹಿಳಾ ಶಿಕ್ಷಕರಾದ ಶಮೀಮ್ ತಾಜ್(ಹಿಂದಿ ಶಿಕ್ಷಕಿ) ಚನ್ನಮ್ಮ. ಬಸವರಾಜಪ್ಪ ಗೊಗ್ಗದರ( ವಿಜ್ಞಾನ ಶಿಕ್ಷಕಿ) ಹಾಗೂ ಮೂರು ಜನ ಅತಿಥಿ ಶಿಕ್ಷಕಿಯರು ಮತ್ತು ಪುಷ್ಪಧಾರೇಶ್ವರ್( ಗೌರವ ಶಿಕ್ಷಕಿ) ಇವರೆಲ್ಲರ ಸಹಾಯದಿಂದ ಮತ್ತು ಅತ್ಯುತ್ತಮ ಎಸ್.ಡಿ.ಎಮ್.ಸಿ ಸಹಕಾರದಿಂದ ಶಾಲೆಯು ಉತ್ತಮ ಸ್ಥಾನಕ್ಕೇರಿದೆ ತನ್ಮೂಲಕ ಉತ್ತಮ ಶಾಲಾ ಪರಿಸರ, ಕಲಿಕೆ, ಸಾಂಸ್ಕೃತಿಕ ಮತ್ತು ಪಠ್ಯೇತರ ಚಟುವಟಿಕೆಯಲ್ಲಿ ಎಲ್ಲರ ಗಮನ ಸೆಳೆದಿದೆ. ಗೈಡ್ ಬಾಲಕಿಯರು 17ನೇ ರಾಷ್ಟ್ರೀಯ ಸ್ಕೌಟ್‌ಗೈಡ್ ಜಾಂಬೂರಿನಲ್ಲಿಭಾಗವಹಿಸಿ ಜಿಲ್ಲೆ ಉತ್ತಮ ಹೆಸರು ತಂದಿರುತ್ತಾರೆ. ರಾಷ್ಟ್ರೀಯ ಜಾಂಬೂರಿಯಲ್ಲಿ ಮತ್ತು "ಈ ಭೂಮಿ ನಮ್ಮದು" ಎಂಬ ಚಂದನವಾಹಿನಿಯ ಕಾರ್ಯಕ್ರಮದಲ್ಲಿ ಬಾಲಕಿಯರು "ಡೊಳ್ಳು-ಕುಣಿತ" ಪ್ರದರ್ಶಿಸಿರುತ್ತಾರೆ. ಶಾಲೆಯು ಪರಿಸರ ಸ್ನೇಹಿ ಹಾಗು ಮಕ್ಕಳ ಸ್ನೇಹಿ ಶಾಲೆಯಾಗಿ ಹೊರ ಹೊಮ್ಮಿದ್ದು 2017-18 ಸಾಲಿನಲ್ಲಿ "ಧನ್ವಂತರಿ ಶಾಲೆ", 2016-17- ಹಳದಿ ಶಾಲೆ, 2017-18- ಹಸಿರು ಶಾಲೆ, 2018-19- ಅತ್ಯುತ್ತಮ ಪರಿಸರ ಪ್ರಜ್ಞೆಯುಳ್ಳ "ಪರಿಸರ ಸ್ನೇಹಿ ಹಸಿರು ಶಾಲೆ"ಎಂಬ ಪ್ರಶಸ್ತಿ ಪಡೆದುಕೊಂಡಿದೆ. "ನಿಸರ್ಗ ಮಡಿಲು" ಎಂಬ ಇಕೋ ಕ್ಲಬ್ ಅಡಿಯಲ್ಲಿ ಉತ್ತಮ ಪರಿಸರ ಜಾಗೃತಿ ಮತ್ತು ಉಳುವಿನ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದೆ.

ಕಿತ್ತೂರು ಚನ್ನಮ್ಮ ಮತ್ತು ಚಾಂದ್ ಬಿಬೀ ಗೈಡ್ ಕಂಪನಿಗಳು ಇದ್ದು ಸ್ಕೌಟ್‌ಗೈಡ್ ದ್ಯೇಯ, ಉದೇಶ, ಸೇವಭಾವನೆ, ರಾಷ್ಟ್ರ ಪ್ರೇಮವನ್ನು ಬೆಳಸುತ್ತಿವೆ. ನಮ್ಮ ಶಾಲೆಯಲ್ಲಿ ಓದುತ್ತಿರುವ ಬಹಳಷ್ಟು ವಿದ್ಯಾರ್ಥಿಗಳು ಸ್ಕೌಟ್ ಗೈಡ್ ನ ಪುರಾಸ್ಕಾರ ಪಡೆದಿರುತ್ತಾರೆ. ಈ ವಿದ್ಯಾರ್ಥಿಗಳ ಸಾಧನೆಯನ್ನು ಗುರುತಿಸಿ ಮುಖ್ಯ ಶಿಕ್ಷಕಿಯಾದ ನನಗೂ ಕೂಡ ಸ್ಕೌಟ್‌ಗೈಡ್ ರಾಜ್ಯ ಪರಿಷತ್ ಸದಸ್ಯತ್ವ ಲಭಿಸಿದೆ. ರಾಷ್ಟ್ರೀಯ ಶಿಕ್ಷಕರ ಸಮ್ಮೇಳನದಲ್ಲಿ "ರಾಜ್ಯ ಮಟ್ಟದ ಅತ್ಯುತ್ತಮ ಶಿಕ್ಷಕಿ" ಪ್ರಶಸ್ತಿ ಲಭಿಸಿದೆ. ಈಲಾ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿ ದೊರೆತಿದೆ. ನಮ್ಮ ಶಾಲೆಯಲ್ಲಿಯೇ ಕಾರ್ಯನಿರ್ವಹಿಸಿದ ಶ್ರೀ ರಾಮಕೃಷ್ಣಪ್ಪ ಶಿಕ್ಷಕರು ರಾಷ್ಟ್ರ ಪ್ರಶಸ್ತಿ ಪಡೆದ ಶಿಕ್ಷಕರಾಗಿರುತ್ತಾರೆಂದು ತಿಳಿಸಲು ಹರ್ಷೀಸುತ್ತೇನೆ.

## ಶಾಲೆಯಲ್ಲಿ ಕೈಗೊಂಡ ನಾವೀನ್ಯಯುತ ಚಟುವಟಿಕೆಗಳು:-

1. ಚಟುವಟಿಕಯಾಧಾರಿತ ಅಕ್ಷರ ಮತ್ತು ಕಲಿಕಾಂಶಗಳ ಕಲಿಕೆ
2. ಸ್ವ ಕಲಿಕೆಗೆ ಆದ್ಯತೆ
3. ಆಟದ ಜೊತೆಗೆ ಮಾನಕಗಳನ್ನು ಅರ್ಥಮಾಡಿಕೊಳ್ಳುವುದು
4. ಪರಿಸರ ಜ್ಞಾನ "ಹಸಿರುಬದುಕು" "ಹಸಿರು ವಸ್ತುಗಳ ಬಳಕೆ" ಶಿಕ್ಷಣಕ್ಕೆ ಒತ್ತು ಕೊಡುವುದು.
5. ಗ್ರಾಮದ ಸಂಪನ್ಮೂಲ ವ್ಯಕ್ತಿಗಳ ಸಲಹೆ ಸಹಕಾರ
6. ಕಲಿಕೆ ಸುಲಭಗೊಳಿಸಲು T.L.M ತಯಾರಿಕೆ (ಶಿಕ್ಷಕರಿಂದ ಮತ್ತು ಮಕ್ಕಳೆ ತಯಾರಿಸುವುದು)
7. ಶಾಲಾ ಭೌತಿಕ ಪರಿಸರದಲ್ಲಿ ಅನುಪಯುಕ್ತ ವಸ್ತುಗಳಿಂದ ಕಲಿಕಾ ವಾತಾವರಣ ನಿರ್ಮಾಣ.
8. "ಮಾಡಿಕಲಿ- ನೋಡಿ ತಿಳಿ ವೈಜ್ಞಾನಿಕ ಸಂಶೋಧನೆ" ಪ್ರಯೋಗ ವಿಧಾನ, ಪ್ರಾತ್ಯಕ್ಷಿಕೆ, ಇತ್ಯಾದಿ ವಿಧಾನದಿಂದ ವೈಜ್ಞಾನಿಕ ವಿಷಯಗಳನ್ನು ಅರಿಯುವಿಕೆಯಿಂದ ವೈಜ್ಞಾನಿಕ ಮನೋಭಾವನೆಯನ್ನು ವಿದ್ಯಾರ್ಥಿಗಳಲ್ಲಿ ಬೇಳಸುವುದು.
9. ಪ್ರೇರಣ ಕ್ಲಬ್- ಸಹಪಾಠಿ ಕಲಿಕೆ.
10. ಶೈಕ್ಷಣಿಕ ಪ್ರಾವಸ, ಸಮೀಕ್ಷೆಗಳು, ಹೊರಸಂಚಾರ, ಕ್ಷೇತ್ರಬೇಟಿ, ಪ್ರಾಜೆಕ್ಟ್‌ವರ್ಕ, ಗ್ರಂಥಾಲಯ ಸದ್ಬಳಕೆ, ಓದು ಕರ್ನಾಟಕ, ರಸಪ್ರಶ್ನೆ, ಮೋಜಿನ ಗಣಿತ, ಕ್ರಾಪ್ಟ್ ಚಟುವಟಿಕೆ, ಕ್ಲೆ-ಮೊಡಲಿಂಗ್, ಚಿತ್ರಕಲೆ, ವ್ಯಕ್ತಿ ಮತ್ತು ಗೃಹ ಕೈಗಾರಿಕೆಗಳ ಬಗ್ಗೆ ಸಂದರ್ಶನ ವಾರ್ಷಿಕೊತ್ಸವದ ಮೂಲಕ ಮಕ್ಕಳ ವಾಕ್ ಚಾತುರ್ಯ ಮತ್ತು ಕಾಲಾ ಆಭಿರುಚಿ ಬೆಳಸುವುದು. ( NO BAG DAY ಚಟುವಟಿಕೆಯಲ್ಲಿ)

11. ಸುತ್ತಮುತ್ತಲಿನ ಪರಿಸರದಲ್ಲಿ ಗಿಡಮೂಲಿಕೆ ಶೋಧಿಸಿ ಅವುಗಳನ್ನು ಬೆಳಸಿ ಅಧ್ಯಯನ ಮಾಡಿ ಔಷಧಿ ಗುಣಗಳನ್ನು ಗುರುತಿಸಿ, ಔಷಧಿ ತಯಾರಿಸಿ ಬಳಸಿ ದಾಖಲಿಸಿ "ಬಾಲಧನ್ವಂತರಿ" ಗ್ರಂಥ ರಚನೆ.
12. ಇಕೊ ಕ್ಲಬ್ ಮತ್ತು ಪರಿಸರ ಮಿತ್ರ ಕಾರ್ಯಕ್ರಮದಲ್ಲಿ ಪ್ಲಾಸ್ಟಿಕ್ ಬಳಕೆ ನಿಷೇಧ ಮತ್ತು ಕಸದ ವಿಲೇವಾರಿ ವೈಯಕ್ತಿಕ ಹಾಗೂ ಪರಿಸರ ಸ್ವಚತೆ ಅರಿವು ಮೂಡಿಸುವುದು.

### ಆರಂಭದಲ್ಲಿ ಎದುರಿಸಿದ ಸಮಸ್ಯೆಗಳು/ಸವಾಲುಗಳು:–

1. ಶಿಕ್ಷಕರ ಕೊರತೆಯ ಸಮಸ್ಯೆ.
2. ವಿದ್ಯಾರ್ಥಿಗಳ ಸಂಖ್ಯೆ ಇಳಿಕೆಯಾಗುತ್ತಿರುವುದು.
3. ಗೈರು ಹಾಜರಿ ಸಮಸ್ಸೆ.
4. ಕೊಠಡಿಗಳ ಕೊರತೆ.
5. ಪೋಷಕರ ಸ್ಪಂದನೆ ಇಲ್ಲದಿರುವುದು. ( ಮಕ್ಕಳ ಶೈಕ್ಷಣಿಕ ಪ್ರಗತಿ ಬಗ್ಗೆ ಕಾಳಜಿ ಇಲ್ಲದಿರುವುದು)
6. ಕುಡಿಯುವ ನೀರಿನ ಸಮಸ್ಯೆ.
7. ಶಾಲೆಗೆ ಆಟದ ಮೈದಾನ ಇಲ್ಲದಿರುವುದು.
8. ಕಾಪೌಂಡ್‌ಗೆ ಗೇಟ್ ಇಲ್ಲದಿರುವುದು.
9. ಕಲ್ಲಿನಿಂದ ಕೂಡಿದ ಶಾಲಾ ಆಂಗಳ
10. ಗೆದ್ದಲು ಹತ್ತಿರುವ ಮತ್ತು ಸೋರುತ್ತೀರುವ ಮೇಲ್ಛವಣಿ.
11. ಕಟ್ಟಡದ ಪಕ್ಕದಲಿಯೇ ಹೆಮ್ಮರಗಳು ಇರುವುದರಿಂದ ಬೀಳುವ ಭಯ.
12. ಎಸ್.ಡಿ.ಎಮ್.ಸಿ ಯವರಿಗೆ ತಮ್ಮ ಕರ್ತವ್ಯಗಳ ಬಗ್ಗೆ ಅರಿವು ಇಲ್ಲದಿರುವುದು.

### ಸವಾಲುಗಳಿಗೆ ಕೈಗೊಂಡ ಕ್ರಮಗಳು:–

1. ಗ್ರಾಮಸ್ಥರ ನೇರವಿನಿಂದ ಗೌರವ ಶಿಕ್ಷಕರ ನೇಮಕ.
2. ಹಳೇ ವಿದ್ಯಾರ್ಥಿಗಳಿಂದ ಪಾಠ ಬೋಧನೆ.
3. ಅಕ್ಷರ ಮಡಿಲು ಕಾರ್ಯಕ್ರಮ ಎಂದರೆ ಜನವರಿ ತಿಂಗಳಿನಿಂದಲೇ ಮನೆ ಬೇಟಿ, ಪೋಷಕರ ಮನ ಒಲಿಕೆ, ಸರ್ಕಾರಿ ಸೌಲಭ್ಯಗಳ ಪ್ರಚಾರ.
4. ಈಗಾಗಲೇ ಶೈಕ್ಷಣಿಕ ಕಾರ್ಯಕ್ಕೆ ಗ್ರಾಮಸ್ಥರ ಸಹಕಾರದಿಂದ ಸಿದ್ಧಪಡಿಸಿದ ಕಲಿಕಾ ವಾತಾವರಣದ ಪ್ರಚಾರ.
5. ಪೋಷಕರ ಸಭೆ, ತಾಯಂದಿರ ಸಭೆ, ಎಸ್.ಡಿ.ಎಮ್.ಸಿ ಸಭೆ, ಹಳೇ ವಿದ್ಯಾರ್ಥಿಗಳ ಸಭೆ, ಮನೆ ಬೇಟಿ ಜಾಥಾ ನಡೆಸಿ ಪೋಷಕರು ಮತ್ತು ಮಕ್ಕಳಿಗೆ ಗೈರು ಹಾಜರಾಗುವಂತೆ ಜಾಗೃತಿ ಮೂಡಿಸಲಾಯಿತು.
6. ಕೊಠಡಿ ಕೊರತೆ:– ಗ್ರಾಮ ಪಂಚಾಯ್ತಿ ಹಾಗು ಜಿಲ್ಲಾ ಪಂಚಾಯ್ತಿಗೆ, ಇಲಾಖೆಗೆ, ಬೇಡಿಕೆ ಸಲ್ಲಿಸಲಾಗಿ ಗ್ರಾಮ ಪಂಚಾಯ್ತಿ ಹಳೇ ಕಟ್ಟಡವನ್ನು ಸುಪರ್ದಿಗೆ ಪಡೆಯಲಾಯಿತು.
7. ಮಕ್ಕಳ ಕಲಿಕಾ ಚಟುವಟಿಕೆ ಪ್ರದರ್ಶನ (ಓದಿನ ಸ್ಪರ್ಧೆ, ರಸಪ್ರಶ್ನೆ, ಪ್ರಬಂಧ, ಕೈಬರಹ, ಚಿತ್ರಕಲೆ, ಬಾಯಿಪಾಠ. ಇತ್ಯಾದಿ ಸ್ಪರ್ಧೆ ನಡೆಸಿ ಬಹುಮಾನ ವಿತರಣೆ.
8. **ಕುಡಿಯುವ ನೀರು:–** ಬಾವಿ ಸ್ವಚತೆ, ಗ್ರಾಮದಲ್ಲಿ ನಿಂತುಹೋದ ಹಳೇ ಬೋರ್ ರಿಪೇರಿ, ದಾನಿಗಳಿಂದ ಮಿಷನ್ ಪಡೆದು 1000ಲೀಟರ್ ನೀರಿನ ಸಿಂಟೆಕ್ಸ್‌ಗೆ ಏರಿಸಿ ಎಲ್ಲಾ ಕಡೆ ನಲ್ಲಿ ವ್ಯವಸ್ಥೆ, ಅಕ್ಷರ ದಾಸೋಹಕ್ಕೆ ಮತ್ತು ಕೆನರ ಬ್ಯಾಂಕ್ನಿಂದ ದಾನವಾಗಿ ಪಡೆದ ಶುದ್ಧನೀರಿನ ಘಟಕದ ಫಿಲ್ಟರ್‌ಗೂ ಸರಬರಾಜು ಕಲ್ಪಸಲಾಗಿದೆ. ಮಳೆ ನೀರು ಮತ್ತು ಬಳಸಿದ ನೀರು ಇಂಗಲು ಇಂಗು ಗುಂಡಿ ವ್ಯವಸ್ಥೆ ಮಾಡಲಾಯಿತು.

9. ಶಾಲೆಗೆ ಆಟದ ಮೈದಾನ ಇಲ್ಲದಿರುವುದು:– ಗ್ರಾಮಸ್ಥರ ಸಹಾಯದಿಂದ ಅರಣ್ಯ ಇಲಾಖೆ ಮತ್ತು ಗ್ರಾಮ ಅರಣ್ಯ ಸಮಿತಿಗೆ ಅರ್ಜಿಸಲ್ಲಿಸಿ ಸ್ವಲ್ಪ ಭಾಗ (1 ಎಕರೆ) ಕಾಯ್ದಿರಿಸಿ ಸ್ವಚ್ಛಗೊಳಿಸಿ ಸಮತಟ್ಟುಗೊಳಿಸಿ ಅಗಳ ತೆಗಿಸಿ ಸಶಿ ನೆಡಲಾಗಿದೆ.
10. ಶಾಲೆಯ ಕಾಂಪೌಂಡ್ ಗೇಟ್ ನಿರ್ಮಿಸಲು ಸ್ವತಂತ್ರ ಹೋರಾಟಗಾರರಾದ ದಿ॥ ಸಂಗಪ್ಪ ನಾಯಕರ ಸ್ಮರಾಣಾರ್ಥ ರವರ ಕುಟುಂಬ ವರ್ಗದವರಿಂದ ದಾನ ಪಡೆದು ನಿರ್ಮಿಸಲಾಗಿದೆ.
11. ಗೊಚ್ಚುಕಲ್ಲಿನಿಂದ ಕೂಡಿದ ನೆಲಕ್ಕೆ ಲೋಡಗಟ್ಟಲೆ ಮಣ್ಣು ತುಂಬಿ ಗಿಡ ನೆಟ್ಟು ಅವುಗಳಿಗೆ ಜಮ್ಮಿಟ್ಟಿಗೆ ಗಣಿದನಿಗಳಿಂದ ಕಲ್ಲು ಪಡೆದು ದಾರಿ ಮಾಡಿ ಕೈತೋಟ ಹೂಬಳ್ಳಿಗಳ ಕಾಮನು ನಿರ್ಮಿಸಿ ಹಳೇ ವಿದ್ಯಾರ್ಥಿಗಳಿದ ಬಣ್ಣ ಹಾಕಿ ಆಕರ್ಷಕ ಗೊಳಿಸಲಾಗಿದೆ.
12. ಜಿಲ್ಲಾ ಪಂಚಾಯತ್ ಸದಸ್ಯರ ಅನುದಾನದಲ್ಲಿ ಮೇಲ್ಛಾವಣಿ ರಿಪೇರಿ ಮಾಡಿಸಲಾಯಿತು.
13. ಖಆಒಅ ಯವರಿಗೆ ಹೊಸದಾಗಿ ಎಸ್.ಡಿ.ಎಮ್.ಸಿ ರಚಿಸುವಾಗ ಮತ್ತು ಎಸ್.ಡಿ.ಎಮ್.ಸಿ ಅವರ ಕರ್ತವ್ಯಗಳ ಬಗ್ಗೆ ಅರಿವು ನೀಡಲಾಯಿತು. ಇಲಾಖೆಯವರು ನೀಡುವ ತರಬೇತಿಗಳಿಗೆ ಹಾಜರಾಗುವಂತೆ ಮಾಡಿ ಅಸಕ್ತಿ ಮೂಡಿಸಲಾಯಿತ್ತು.

**ಶಾಲೆಯ ಅಭಿವೃದ್ಧಿಗಾಗಿ ದಾನಿಗಳ ಸದ್ಬಳಕೆ:–**

**ಶ್ರಮ :–** ಸುಂದರವಾದ ಗಾರ್ಡನ್ ನಿರ್ಮಿಸಲು ರಜಾ ದಿನದಂದು ಸ್ವತಃ ಶಿಕ್ಷಕರು ಎಸ್.ಡಿ.ಎಮ್.ಸಿ ಸದಸ್ಯರು ಕಲ್ಲು ಕ್ವಾರಿಗೆ ಹೋಗಿ ಜಲ್ಲಿಯನ್ನು ಲಾರಿಗೆ ತುಂಬಿ ತಂದು ಮರಳು ತಂದು ಪಾಥ್ ನಿರ್ಮಾಣ. ಹಳೆ ವಿದ್ಯಾರ್ಥಿಗಳು ಕ್ರೀಡಾಅಂಕಣಗಳನ್ನು ಹಾಕಿ ಕೊಟ್ಟು ಕ್ರೀಡಾ ತರಬೇತಿ ನೀಡಿದರು.

**ಸಮಯ:–** ವನಪಾಲಕರು ಅರಣ್ಯ ಇಲಾಖೆ ಸಿಬ್ಬಂದಿ ಗಿಡ ಬೆಳೆಸಲು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿ ಗಿಡ ನಡೆಸಿದ್ದು. ನಾಟಿ ವೈದ್ಯರಿಂದ ಔಷದಿ ಸಸ್ಯ ಮತ್ತು ಔಷದಿ ತಯಾರಿಸಲು ತಿಳುವಳಿಕೆ.

**ಕಲೆ :–** ಚಿತ್ರ ಕಲೆ, ಕೋಲಾಟ, ಡೊಳ್ಳುಕುಣಿತ, ಬಯಲಾಟ, ತಬಲಾವಾದನ ಇವುಗಳ ಬಗ್ಗೆ ಗ್ರಾಮದ ಹಿರಿಯರು ತರಬೆತಿ ನೀಡಿ ಮಕ್ಕಳು ಸಾಂಸ್ಕೃತಿಕ ಕ್ಷೇತ್ರದಲ್ಲಿ ಪ್ರಶಸ್ತಿ ಪಡೆಯಲು ಪ್ರೋತ್ಸಾಹ ನೀಡಿರುತ್ತರೆ.

**ಧನ ಸಹಾಯ :–**

1. ಗಾರ್ಡನ್‌ಗಾಗಿ ಗೊಚ್ಚು ಕಲ್ಲು, ಸಿಮೆಂಟ್ ಚೀಲ, ಮರಳು ಸರಬರಾಜು ಮಾಡಿ ಸುಂದರವಾದ ಗಾರ್ಡನ್ ನಿರ್ಮಾಣ. ಮತ್ತು ಶೋ ಗಿಡಗಳ ಕೊಡುಗೆ. ( ಶ್ರೀ ರಮೇಶ. ಟಿ ಎಸ್.ಡಿ.ಎಮ್.ಸಿ ಅಧ್ಯಕ್ಷರು 2015–18 ಇವರ ಪರಿಶ್ರಮ)
2. ಕುಡಿಯುವ ನೀರಿಗಾಗಿ ಕೆಟ್ಟುಹೋದ ಬೋರ್ ಗೆ ಮೀಷನ್ ಅಳವಡಿಕೆ.
3. 1000 ಲೀಟರ್ ಸಿಂಟೆಕ್ಸ್ ದೇಣಿಗೆ
4. ಕೆನರಾ ಬ್ಯಾಂಕ್ ಚಂದ್ರಗುತ್ತಿ ಇವರಿಂದ ಫಿಲ್ಟರ್ ದೇಣಿಗೆ
5. ಶಾಲೆಯ ನಾಮಫಲಕ ದೇಣಿಗೆ
6. ರಾಷ್ಟ್ರೀಯ ವ್ಯಕ್ತಿಗಳ 32 ಭಾವ ಚಿತ್ರಗಳ (ಪೋಟೊ) ದೇಣಿಗೆ
7. ಉಡಿಜಜಟ ಃಂಚಿಡಿಜ ಮತ್ತು 2 Podium (ವೇದಿಕೆ ಪೀಠ) ದೇಣಿಗೆ
8. ಅಂಟಣಿಣಣಜಡಿ – ದೇಣಿಗೆ ಲಯನ್ಸ್ ಕ್ಲಬ್ ಸೊರಬ ಅವರಿಂದ (ಸ್ಥಳಿಯರಾದ ರಾಜಶೇಖರ ಗೌಡ್ರು ಹೊಸಬಾಳೆ ಮತ್ತು ಶ್ರೀ ಕೃಷ್ಣಶೆಟ್ಟಿ ಎಸ್.ಡಿ.ಎಮ್.ಸಿ ಅಧ್ಯಕ್ಷರು ಇವರ ಪರಿಶ್ರಮದಿಂದ )
9. **"ಅಕ್ಷರ ಜೋಳಿಗೆ"** ಸ ಸುಗ್ಗಿ ಕಾಲದಲ್ಲಿ ಪೋಷಕರಿಂದ ಹಣ ಸಂಗ್ರಹಿಸಿ ಶಾಲೆಯ ಅಭಿವೃದ್ಧಿ ಮತ್ತು **ಓದುವ ಕಾರ್ನರ್** ನಿರ್ಮಿಸಲಾಗಿದೆ.

**ಜ್ಞಾನ:–**

1. ಕ್ರೀಡೆ – ರಾಜ್ಯ ಮಟ್ಟದ ಕ್ರೀಡಾಪಟ್ಟುಗಳು ವಿದ್ಯಾರ್ಥಿಗಳಿಗೆ ತರಬೇತಿ ನೀಡಿರುತ್ತಾರೆ.
2. ಆರೋಗ್ಯ– ನರ್ಸ್ ಹುದ್ದೆಯಲ್ಲಿರುವ ಹಳೆ ವಿದ್ಯಾರ್ಥಿಗಳಿಂದ ಮಾರ್ಗದರ್ಶನ
3. ಕಸದಿಂದ ರಸ (ಕರಕೌಶಲ್ಯತೆ)– ಊರಿನ ಹಿರಿಯರಿಂದ ಮಾರ್ಗದರ್ಶನ.
4. ಶೈಕ್ಷಣಿಕ ಸಹಾಯ– ಶ್ರೀಮತಿ ಪುಷ್ಪಾ ದಾರೇಶ್ವರ್ ಶಾಲೆಗೆ ಬಂದು ಗೌರವ ಶಿಕ್ಷಕಿಯಾಗಿ ಕಾರ್ಯ ನಿರ್ವಹಣೆ.
5. ತೋಟಗಾರಿಕೆ– ಪೋಷಕರು ಮತ್ತು ಅಡುಗೆ ಸಿಬ್ಬಂದಿ ಸಹಾಯದಿಂದ ವಿದ್ಯಾರ್ಥಿಗಳು ಧನ್ವಂತರಿವನ ಮತ್ತು ಕೈ–ತೋಟದಲ್ಲಿ ತರಕಾರಿ, ಹೂವಿನ ಗಿಡ ಬೆಳಸಿರುವುದು.

**ಶಾಲಾ ಅನುದಾನದ ಸದ್ಬಳಕೆ:–**

1. ದಾಖಲೆಗಳ ಕಡತ ಸಂರಕ್ಷಿಸಲು ಭದ್ರವಾದ ಗಾಡ್ರೇಜ್ ಖರೀದಿ.
2. **ಕುಡಿಯುವ ನೀರಿನ ಸೌಲಭ್ಯ:–** ಅಕ್ಷರ ದಾಸೋಹಕ್ಕೆ ಮತ್ತು ಮಕ್ಕಳಿಗೆ ಕೈ ತೊಳೆಯಲು ಹಾಗೂ ಶೌಚಾಲಯಕ್ಕೆ ನಲ್ಲಿಗಳ ವ್ಯವಸ್ಥೆ ಮಾಡಲಾಗಿದೆ.
3. **ಕೊಠಡಿ ರೀಪೇರಿ–** ಕಿಟಕಿ, ಬಾಗಿಲು, ರ್‍ಯಾಂಪ್ಸ್, ಮೆಟ್ಟಿಲು, ಶೌಚಾಲಯ, ಗೋಡೆ ರೀಪೇರಿ
4. **ನಲಿ–ಕಲಿ ಕೊಠಡಿ ವ್ಯವಸ್ಥೆ:–** ವಾಲ್‌ಸ್ಲೇಟ್, ಆಕರ್ಷಕ ಬಣ್ಣಗಳಿಂದ ವಿಭಿನ್ನ ರೀತಿಯ ಜ್ಞಾನೇಂದ್ರಿಯಗಳನ್ನು ತೋರಿಸುವ ಆಕರ್ಷಕ ಕಲಿಕಾ ತಟ್ಟೆಗಳ ನಿರ್ಮಾಣ, ಕಾರ್ಡ್‌ಜೋಡಣೆ, ಹವಾಮಾನ ನಕ್ಷೆಯ ಬೋರ್ಡ್, ಮಕ್ಕಳು ಕುಳಿತುಕೊಳ್ಳಲು ಮ್ಯಾಟ್, T.L.M ಗಳನ್ನು ವಿಷಯವಾರು ಮೈಲಿಗಲ್ಲುವಾರು ಮೆಟ್ಟಿಲುವಾರು ಜೋಡಿಸಲು ಕಲಿಕಾ ಕಪಾಟು, ಹೊರಗೋಡೆಯ ಮೇಲೆ 1 ರಿಂದ 10 ಹಂತದಲ್ಲಿ ಬರುವ ಅಕ್ಷರ, ಪದ,ವಾಕ್ಯಗಳ ಸಂಗ್ರಹ ಬರವಣಿಗೆ, ಹೊರ ಗೋಡೆ ಮತ್ತು ಕಂಬಗಳಿಗೆ ಆಕರ್ಷಕರೀತಿಯಲ್ಲಿ ಕಲಿಕಾಂಶಗಳು ಮತ್ತು ಮಗ್ಗಿಗಳು (ಸೀದಾ ಮತ್ತು ಉಲ್ಟಾ) ಬರವಣಿಗೆ.
5. **ಗ್ರಂಥಾಲಯ ಬಳಕೆ:–** ಸುಮಾರು 2000 ಪುಸ್ತಕಗಳನ್ನು ಇಡಲು ತೆರೆದ ಗಾಜಿನ ಕಪಾಟು. ಪಡೇ ಭಾರತ್–ಬಡೇ ಭಾರತ್ ವ್ಯವಸ್ಥೆ.
6. **ENGLISH CORNER:-** Basic and spoken English ಕಲಿಯುವ ವ್ಯವಸ್ಥೆಗಾಗಿ English Corner.
7. ಕನ್ನಡ ವ್ಯಾಕರಣ ಕಲಿಕೆಗಾಗಿ ಕನ್ನಡ ಕಾರ್ನರ್ ಸಿದ್ದತೆ.
8. ಹಿಂದಿ ಕಲಿಕೆಗಾಗಿ ಹಿಂದಿ ಕಾರ್ನರ್ ಸಿದ್ದತೆ.
9. ಶಾಲೆಯ ಮುಂಭಾಗಕ್ಕೆ ಶಾಲೆಯ ನಾಮಫಲಕ, ಕಾಂಪೌಂಡ್‌ಗೆ ಜಾಗೃತಿ ಬರವಣಿಗೆ, ಸರ್ಕಾರಿ ಸೌಲಭ್ಯಗಳ ಪ್ರಕಟಣಾ ಫಲಕ, ಗ್ರಾಮ ನಕ್ಷೆ, ಅಕ್ಷರದಾಸೋಹಕ್ಕೆ ಮಾರ್ಗದರ್ಶಕ ಬರವಣಿಗೆ.
10. ಕೊಠಡಿ ಹಾಗೂ ಶಾಲಾ ಕಾಂಪೌಂಡ್, ಶೌಚಾಲಯ, ರಂಗಮಂದಿರ, ಅಕ್ಷರದಾಸೋಹ ಕೋಣೆಗೆ ಪ್ರತಿ ವರ್ಷ ಬಣ್ಣ ಹಚ್ಚಿಸಿದೆ.
11. ಅಕ್ಷರದಾಸೋಹಕ್ಕೆ 20 ಲೀಟರ್ ಕುಕ್ಕರ್, ಹಾಗೂ ದಾಸ್ತನಿಗಾಗಿ ಸುರಕ್ಷತಾ ಡಬ್ಬಿಗಳ ಖರೀದಿ.
12. 7 ಕುರ್ಚಿಗಳು, 1 ಕಂಪ್ಯೂಟರ್ ಟೇಬಲ್ ಖರೀದಿ.
13. ವಿಜ್ಞಾನ ಉಪಕರಣಗಳು– ರಾಸಯನಿಕಗಳು, Specimens, ಮಾದರಿಗಳು, ಚಾರ್ಟ್‌ಗಳ ಖರೀದಿ.

ಈ ಎಲ್ಲಾ ಕಾರ್ಯಗಳು ಕೂಡ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ದಾಖಲಾತಿ ಹೆಚ್ಚಿಸಲು ಮಾಡಿರುವ ಕಾರ್ಯಗಳು ಇದರಿಂದ 81 ಮಕ್ಕಳಿಂದ ಶಾಲೆಯು ಇಂದು 116 ಮಕ್ಕಳುನ್ನು 3 ಜನ ಶಿಕ್ಷಕರಿಂದು (3 ಜನ ಅತಿಥಿ ಶಿಕ್ಷಕರು) 6 ಜನ ಶಿಕ್ಷಕರನ್ನು ಹೊಂದಿ ಅತ್ಯುತ್ತಮ ಶೈಕ್ಷಣಿಕ ಕಾರ್ಯ ನಿರ್ವಹಿಸುವ ಶಿಕ್ಷಕರ ವಿದ್ಯಾರ್ಥಿಗಳ ಎಸ್.ಡಿಎಮ್.ಸಿ ಯ ಹಳೇ ವಿದ್ಯಾರ್ಥಿ ಸಂಘದ ಪೋಷಕರ ಆಕರ್ಷಕ ವಿದ್ಯಾಲಯವಾಗಿದೆ ಎಂದು ಹೇಳುವುದರೊಂದಿಗೆ 2018-19 ಸಾಲಿನ ದಾಖಾಲಾತಿ ಹಳೇ ವಿದ್ಯಾರ್ಥಿ ಸಂಘ ಮತ್ತು ಎಸ್.ಡಿ.ಎಮ್.ಸಿ ಸಹಕಾರದಿಂದ ನಡೆಸಿದ ವಿಶೇಷ ದಾಖಲಾತಿ ಆಂದೋಲನ ಕಾರ್ಯಕ್ರಮದಿಂದ ವಿದ್ಯಾರ್ಥಿಗಳ ದಾಖಲಾತಿ 2019-20 ಕ್ಕೆ 116 ಏರಿಕೆಯಾಗಿದೆ ಎಂಬ ಮಾಹಿತಿಯನ್ನು ಹೆಮ್ಮೆಯಿಂದ ನೇವೇದಿಸುತ್ತೇನೆ.

**ಕಾರ್ಯ ನಿರ್ವಹಣೆ :-**

ಮಹಿಳಾ ಶಿಕ್ಷಕಿಯರು ಮತ್ತು ಚಿಕ್ಕ ಮಕ್ಕಳ ತಾಯಂದಿರು ಏನು ಸಾಧನೆ ಮಾಡೀಯಾರು ಎನ್ನವಂತೆ ಇದ್ದ ಶಾಲೆ ಇಂದು ಅದೇ ಶಿಕ್ಷಕಿಯರು ಪ್ರಾಮಾಣಿಕ ಕರ್ತವ್ಯದಿಂದ ಶಾಲೆಯು ಸುಂದರ ಮತ್ತು ಉತ್ತಮ ಕಲಿಕಾ ವಾತಾವರಣ ನಿರ್ಮಿಣಗೊಂಡು ಎಲ್ಲರ ಗಮನ ಸೆಳೆದಿದೆ. ಹಾಗೂ ಚೈತನ್ಯದ ಬುಗ್ಗೆಗಳಂತೆ ಸದಾ ಉತ್ಸಾಹದಿಂದ ಕಲಿಯುತ್ತಿರುವ ಪ್ರತಿಭಾವಂತ ವಿದ್ಯಾರ್ಥಿಗಳು ಎಲ್ಲರ ಗಮನವನ್ನು ಶಾಲೆಯ ಕಡೆ ಸೆಳೆಯುವಂತೆ ಮಾಡಿರುವುದು ಗ್ರಾಮಕ್ಕೂ ಮತ್ತು ಶಾಲೆಗೂ ಹೆಮ್ಮೆತರುವಂತ ವಿಚಾರವಾಗಿದೆ. ಹಾಗು ನಮ್ಮ ಶಾಲೆಯು ಯಶೋಗಾಥೆ ಶಾಲೆಯಾಗಿ ಹೊರಹೊಮ್ಮಿದೆ ಎಂದು ನಾನು ಹರ್ಷದಿಂದ ತಿಳಿಸುತ್ತೇನೆ.

ಮೂರು ಜನ ಶಿಕ್ಷಕರು ಮತ್ತು 116 ಮಕ್ಕಳ ಸಂಖ್ಯೆ ಮೂರು ಜನ ಅತಿಥಿ ಶಿಕ್ಷಕರು ಹಾಗೂ ಒಬ್ಬರು ಗೌರವ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ.

**ಮಕ್ಕಳ ಮಾಹಿತಿ:-**

| ಕ್ರ. ಸಂ | ವರ್ಷ | ಗಂಡು | ಹೆಣ್ಣು | ಒಟ್ಟು |
|---|---|---|---|---|
| 01 | 2015-16 | 38 | 44 | 82 |
| 02 | 2016-17 | 35 | 47 | 82 |
| 03 | 2017-18 | 40 | 45 | 85 |
| 04 | 2018-19 | 52 | 51 | 103 |
| 05 | 2019-20 | 63 | 53 | 116 |





ಭೌತಿಕ ಸೌಲಭ್ಯ:- ಕುಡಿಯುವ ನೀರು




ಧ್ವಜ ಕಟ್ಟೆ



ದಾನಿಗಳಿಂದ ಗಾರ್ಡ್‌ನ್ ನಿರ್ಮಾಣ( ಧನ್ವಂತರಿ ವನ)



ಓದುವ ಕಾರ್ನಾರ್‌ಗಳಿಗೆ ಆಸನ ವ್ಯವಸ್ಥೆ














# ಬೆನ್ನೂರು ಮಾದರಿ ಸರಕಾರಿ ಶಾಲೆ ನೋಡಬನ್ನಿ

26-12-2017

» ನಮ್ಮ ಮೊದಲ ಪುಟದಿಂದ

ಶಾಲೆಯ ತರಗತಿ.

ಶಾಲೆಯ ಕೊಳದಲ್ಲಿ ಅರಳಿದ ತಾವರೆ ಹಾಗೂ ಸಸ್ಯರಾಶಿ.







ನಲಿ–ಕಲಿ ವಾಲ್ ಸ್ಲೇಟ್  ಕಲಿಕಾ ತಟ್ಟೆಗಳು



ನಿಸರ್ಗ ಕಲಿಕೆ

ಶಾಲಾ ಆಂಗಳದಲ್ಲಿ ದಿಕ್ಕುಗಳ ಪರಿಕಲ್ಪನೆ:– ದಿಕ್ಸೂಚಿ

ಇಂಗ್ಲೀಷ್ ಕಾರ್ನರ್, ಕನ್ನಡ ಕಾರ್ನರ್

































